ಸಂಗ್ರಹ – ನರಹರಿಸುಮಧ್ವ



ಜಲಜೇಷ್ಟ ನಿಭಾಕಾರಂ ಜಗದೀಶ ಪದಾಶ್ರಯಂ ।
ಜಗತೀತಲ ವಿಖ್ಯಾತಂ ಜಗನ್ನಾಥ ಗುರುಂ ಭಜೇ ॥

ಕಮಲಗಳಿಗೆ ಪ್ರೀತಿಪಾತ್ರನಾದ ಸೂರ್ಯನಂತೆ ಇರುವ, ಭಗವಂತನ ಪಾದವನ್ನು ಆಶ್ರಯಿಸಿರುವ, ಜಗತ್ತಿನಲ್ಲಿ ವಿಖ್ಯಾತರಾದ ಜಗನ್ನಾಥ ದಾಸರನ್ನು ಭಜಿಸುತ್ತೇನೆ.

## ಜಗನ್ನಾಥದಾಸರು

ಜನ್ಮನಾಮ –ಶ್ರೀನಿವಾಸ

ಜನ್ಮಸ್ಥಳ –ಬ್ಯಾಗವಟ್ಟಿ (ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ)

ಜನ್ಮದಿನ –ಶ್ರಾವಣ ಶುದ್ಧ ಬಿದಿಗೆ (27.7.1727)

ಗೋತ್ರ –ಹರಿತ್ಸ

ಶಾಖ –ಯಜುರ್ವೇದ

ತಂದೆ –ನರಸಿಂಹಾಚಾರ್ಯರು ಅಥವಾ ನರಸಿಂಹದಾಸರು

ತಾಯಿ –ಲಕ್ಷ್ಮೀಬಾಯಿ

ಹೆಂಡತಿ –ತಾಮರಸಮ್ಮ (ಪಾಷ್ಠಿಕವಂಶ)

ಮಕ್ಕಳು –ಇಬ್ಬರು– ತಿಮ್ಮಣ್ಣದಾಸರು ಮತ್ತು ದಾಮೋದರ ದಾಸರು

ವಿದ್ಯಾಗುರುಗಳು –

ಬಲರಾಮಾಚಾರ್ಯರು (ಶ್ರೀ ವರದೇಂದ್ರ ತೀರ್ಥರು),
ವೇಣುಗೋಪಾಲಾಚಾರ್ಯರು ಮತ್ತು ಶ್ರೀ ಸತ್ಯಭೋಧತೀರ್ಥರು.

ಶಿಷ್ಯರು – ದೇಶಪಾಂಡೆ ಕೃಷ್ಣರಾಯರು, ರಾಘವೇಂದ್ರಪ್ಪ ಕವಿ, ಲಿಂಗಸುಗೂರು ಪ್ರಾಣೇಶದಾಸರು, ಶ್ರೀದವಿಠಲದಾಸರು, ಶ್ರೀಶವಿಠಲರು (ಹುಂಡೇಕಾರ ದಾಸಪ್ಪ), ಪ್ರೇಮದಾಸರು, ಗೋಪತಿವಿಠಲ, ಆನಂದ ಮಯವಿಠಲ, ಪ್ರಸನ್ನವಿಠಲ, ಜ್ಞಾನಮಯವಿಠಲ, ಮಾನಾಮಧುರೆ ದಾಸರು, ವೆಂಕಟವಿಠಲ, ಯೋಗೀಂದ್ರವಿಠಲ, ಶ್ರೀನಿವಾಸವಿಠಲ, ಶ್ರೀಪ್ರಾಣೇಶವಿಠಲ (ಚಿಕ್ಕೋಡಿ ಭಗವಂತರಾವ್), ಹುಕ್ಕೇರಿದಾಸರು, ಕುಂಟೋಜಿ ದಾಸರು, ವಿಜಯ ಹಯಗ್ರೀವ, ಸಿರಿವತ್ಸಾಂಕಿತ ಇಂದಿರೇಶ (ಹರಪನಹಳ್ಳಿ ರಾಮಾಚಾರ್ಯರು), ಗುರು ಇಂದಿರೇಶ, ಪ್ರಸನ್ನವಿಠಲ.

ಇವರ ಆಸ್ತಿ ಹೇಗಿತ್ತೆಂದರೆ –

ಬ್ಯಾಗವಟ್ಟಿದೊಳಿಪ್ಪ ನಮ್ಮ ಜಗನ್ನಾಥದಾಸರಿಗೀಗ
ಮೂರು ಸಾಸಿರ ವರಹ ವರುಷಕೆ ಬರುವ ಜಹಗೀರುಗಳು
ಗ್ರಾಮಗಳೇನು ಈಗಿರುತಿಹುದು ।
ಉಳಿದಿಹ ಹಲವು ಮಾನ್ಯಗಳ ಧರ್ಮ ಕಾರ್ಯಕ್ಕೆ
ಶ್ರೋತ್ರಿಯ ಬ್ರಾಹ್ಮಣರ ಜೀವನವೃತ್ತಿಗಲ್ಲದೆ
ದೇವತಾಲಯಕೆಂದು ಕೆಲವನು ಕೊಟ್ಟಿಹರು ।
ಗ್ರಾಮಗಳೇನು ಜಹಗೀರುಗಳು ಗುರುಶ್ರೀ ರಾಘವೇಂದ್ರರ ಸನ್ನಿಧಿಗೆ
ದಾನಧಾರಾಪೂರ್ವಕದಿ ಕೊಟ್ಟರು ಈಗವರೆ ಅನುಭವಿಸುತ್ತಲಿರ್ಪರು
ನೈಜಾಮ ಕರ್ಣಾಟಕದ ಪ್ರಾಂತ್ಯದಲಿ ।

– ರಾಘವೇಂದ್ರಪ್ಪ ಕವಿ

ಪಾಠಪ್ರವಚನ – ತಮ್ಮ ಬ್ಯಾಗವಾಟದ ಸ್ವಗೃಹದಲ್ಲಿಯೇ ಗುರುಕುಲವನ್ನು ಪ್ರಾರಂಭಿಸಿದರು. ವೈಧಿಕ, ಲೌಕಿಕ ಜನರು ಶಿಷ್ಯರಾಗಿ ಬಂದು ಸೇರಿದರು. ಅವರೆಲ್ಲರಿಗೂ ಊಟ, ವಸತಿ ವ್ಯವಸ್ಥೆ ಮಾಡಿದರು. ಕ್ರಮೇಣ ವಿದ್ಯಾರ್ಥಿಗಳು ಹೆಚ್ಚಾದ್ದರಿಂದ ಆಚಾರ್ಯರು ತಾಲ್ಲೂಕು ಸ್ಥಳವಾದ ಮಾನ್ವಿಗೆ ಬಂದು ವಾಸಕ್ಕೆ ದೊಡ್ಡದಾದ ಮನೆಯನ್ನು ಹುಡುಕಿ, ಕಡೆಗೆ ಕಡದಿನ್ನಿ ಎಂಬ ಗ್ರಾಮದ ದೇಸಾಯಿಗೆ ಸೇರಿದ ಮನೆಯನ್ನು ನಿಶ್ಚಯ ಮಾಡಿದರು. ಆ ದೇಸಾಯಿಯಾದರೋ ಆ ಮನೆಗೆ ಬ್ರಹ್ಮರಾಕ್ಷಸ ಬಂದು ಸೇರಿಕೊಂಡಿದ್ದರಿಂದ ಆ ಮನೆಯನ್ನು ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ. ದಾಸರು ದೇಸಾಯಿಗೆ ತಮಗೆ ಆ ಮನೆಯೇ ಬೇಕೆಂದು ಹೇಳಿದರು. ದೇಸಾಯಿ ಹೇಳಿದನು "ಆಚಾರ್ಯರೆ, ಸಂಸಾರಿಗಳಾದ ತಮಗೆ ಈ ಮನೆ

ಅಷ್ಟು ಸುಲಭವಲ್ಲ. ಇಲ್ಲಿ ಬ್ರಹ್ಮರಾಕ್ಷಸನಿದ್ದಾನೆ, ಇಲ್ಲಿ ಸಂಸಾರಿ ಗಳಿರುವುದು ಅಸಾಧ್ಯ" ಎಂದಾಗ, ದಾಸರು ಕೇಳಲಿಲ್ಲ. ಅಲ್ಲೇ ಸಂಸಾರ ಮಾಡಿಕೊಂಡಿದ್ದು ಅಲ್ಲೆ ಮಧ್ವಶಾಸ್ತ್ರ ಪಾಠಪ್ರವಚನ ಮಾಡಿದರು. ಅಲ್ಲಿದ್ದ ಬ್ರಹ್ಮಪಿಶಾಚಿಯೂ ನಾಪತ್ತೆಯಾದ. ಕ್ರಮೇಣ ದೇಸಾಯಿ ಆಚಾರ್ಯರಿಗೇ ಆ ಮನೆಯನ್ನು ದಾನವಾಗಿತ್ತನು. ಈಗ ಅದೇ ಮನೆ ದಾಸರ ಗುಡಿಯಾಗಿದೆ.

ರೋಗಪೀಡಿತರಾದ ಶ್ರೀನಿವಾಸಾಚಾರ್ಯರು –

ಒಮ್ಮೆ ಮಾನ್ವಿಗೆ ಶ್ರೀ ವಿಜಯದಾಸರು ಬಂದಿದ್ದಾಗ, ಶ್ರೀನಿವಾಸಾಚಾರ್ಯ ರನ್ನು ಭೋಜನಕ್ಕೆ ಕರೆದರು. ಆಚಾರ್ಯರು ಅದಕ್ಕೆ ಒಪ್ಪಿಕೊಂಡರು. ಆದರೆ ವಿಜಯದಾಸರು ಊಟಕ್ಕೆ ಸಿದ್ಧವಾದಾಗ ಆಚಾರ್ಯರನ್ನು ಕರೆತರಲು ತಮ್ಮ ಶಿಷ್ಯನೊಬ್ಬನನ್ನು ಕಳುಹಿದರೆ, ಶ್ರೀನಿವಾಸಾಚಾರ್ಯರು "ತಮಗೆ ಹೊತ್ತಾದರೆ ಹೊಟ್ಟೆನೋವು ಬರುವುದರಿಂದ ಭೋಜನ ಆಗಲೇ ಆಗಿದೆ" ಎಂದರು. ಸ್ವೋತ್ತಮರಾದ ಶ್ರೀವಿಜಯದಾಸರಿಗೆ ಸುಳ್ಳುಹೇಳಿದ್ದರಿಂದ ಅವರಿಗೆ ಕ್ಷಯರೋಗವೂ, ಉದರಶೂಲೆಯೂ ಬಂದಿತು. ಇದು ಅವರ ಪೂರ್ವಜನ್ಮದ ಸಂಚಿತ ಕರ್ಮದ ಫಲದ ಜೊತೆಗೆ ವಿಜಯರಾಯರಿಗೆ ಅಗೌರವ ತೋರಿದ್ದರಿಂದ ಬಂದಿತು. ಶ್ರೀನಿವಾಸಾಚಾರ್ಯರಿಗೆ ಬಂದ ಉದರಶೂಲೆ ವಾಸಿಯಾಗದಿದ್ದಾಗ, ಮಂತ್ರಾಲಯಕ್ಕೆ ಹೋಗಿ ರಾಯರ ಸೇವೆ ಮಾಡಿದರು. ರಾಯರು ಅವರಿಗೆ ಸ್ವಪ್ನದಲ್ಲಿ ಬಂದು ವಿಜಯದಾಸರಲ್ಲಿಗೆ ಹೋಗಲು ಹೇಳಿದರು. ಆಗ ಶ್ರೀನಿವಾಸಾಚಾರ್ಯರು ವಿಜಯದಾಸರ ಬಳಿಗೆ ತಿರುಪತಿಗೆ ಹೋದರು. ವಿಜಯದಾಸರೇ ಅವರ ಕಾಯಿಲೆಯನ್ನು ವಾಸಿಮಾಡುವ ಶಕ್ತಿಯಿದ್ದರೂ, ಅವರ ಸ್ವರೂಪೋದ್ಧಾರಕರು ಗೋಪಾಲದಾಸರಾಗಿದ್ದುದರಿಂದ ಗೋಪಾಲದಾಸರಿಗೆ ಹೇಳಿ ೪೦ ವರ್ಷ ಆಯಸ್ಸು ದಾನ ಮಾಡಲು ಹೇಳಿದರು.

ಇವರ ಸ್ವರೂಪೋದ್ಧಾರಕರು – ಗೋಪಾಲದಾಸರು. – ಯಾರು ತಾನೆ ಆಯಸ್ಸು ಪ್ರಧಾನ ಮಾಡುತ್ತಾರೆ? ಆಯಸ್ಸು ಪ್ರಧಾನ ಮಾಡಲು ಇಚ್ಛೆ ಪಟ್ಟರೂ ದಾನ ಮಾಡುವ ವಿಧಾನ ಸಾಧ್ಯವೇ? ಗೋಪಾಲದಾಸರು ಆಕಾಶಾಭಿಮಾನಿ ಗಣೇಶನ ಅಭಿಮಾನಿ. ಅವರು ಭಕ್ತಿಯಿಂದ ಧನ್ವಂತರಿಮಂತ್ರವನ್ನು ಅಭಿಮಂತ್ರಿಸಿ ಪ್ರಾರ್ಥಿಸಿದರು. "ಎನ್ನ ಬಿನ್ನಪ ಕೇಳು ಧನ್ವಂತ್ರಿ ದಯಮಾಡು ಸಣ್ಣವನು ಇವ

ಕೇವಲ" ಎಂಬ ದೇವರನಾಮ ವನ್ನೂ ರಚಿಸಿದರು. ಪ್ರತಿದಿನ ಒಂದೊಂದು ಜೋಳದ ಭಕ್ರಿಯನ್ನು ದೇವರಿಗೆ ಸಮರ್ಪಿಸಿ ಶ್ರೀನಿವಾಸಾಚಾರ್ಯರಿಗೆ ನೀಡಿದರು. ಪ್ರತಿಯೊಂದು ರೊಟ್ಟಿಯೂ ಅವರ ಆಯುಸ್ಸನ್ನು ಒಂದೊಂದು ವರ್ಷ ಹೆಚ್ಚಿಸಿ 40 ವರ್ಷ ಆಯುಸ್ಸು ಹೆಚ್ಚಾಯಿತು. ಗೋಪಾಲದಾಸರು ಅಯುರ್ದಾನ ಮಾಡಿದ ಕಾಲ 1754ನೇ ಇಸವಿ ಶಾಲಿವಾಹನ ಶಕ 1626ನೇ ಭಾವ ಸಂವತ್ಸರ. ಆಗ ಶ್ರೀನಿವಾಸಾಚಾರ್ಯರ ವಯಸ್ಸು 27 ವರ್ಷ.

ಅಂಕಿತ ಪ್ರಾಪ್ತಿ – ಶ್ರೀನಿವಾಸಾಚಾರ್ಯರು ಗೋಪಾಲದಾಸರ ಅಪ್ಪಣೆಯಂತೆ ಪಂಢರಾಪುರಕ್ಕೆ ಹೋಗಿ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಲು ಹೋದಾಗ, ಅವರಿಗೆ ಸಂಸ್ಕೃತ ಲಿಪಿಯಲ್ಲಿ "ಜಗನ್ನಾಥವಿಠಲ" ಎಂದು ಬರೆದಿದ್ದ ಶಿಲೆಯೊಂದು ಸಿಕ್ಕಿತು. ಹೀಗೆ ಅವರ ಅಂಕಿತ ಜಗನ್ನಾಥ ವಿಠಲವೆಂದಾಯಿತು. ಮೊದಲ ದೇವರನಾಮ – ವಿಠಲಯ್ಯ, ವಿಠಲಯ್ಯ

ಗ್ರಂಥಗಳು – ಅನೇಕ ಪದಪದ್ಯ, ಸುಳಾದಿಗಳು, ಉಗಾಭೋಗಗಳು, ತತ್ತ್ವಸುವಾಲಿ ಎಂಬ ತತ್ತ್ವಸಾರಗ್ರಂಥ, ಹರಿಕಥಾಮೃತಸಾರ

ಇವರಿಂದ ತಿರುಮಲದಾಸರೆಂಬ ಜನಾರ್ಧನವಿಠಲಾಂಕಿತರಾದ ಶಿಷ್ಯರಿಗೆ ಅಪಮೃತ್ಯು ಪರಿಹಾರ, ರೋಗ ಪರಿಹಾರ

ಸಮಕಾಲೀನರು – ಶ್ರೀವಾದೀಂದ್ರರು, ಶ್ರೀವಸುದೇಂದ್ರರು, ಶ್ರೀ ವರದೇಂದ್ರರು, ಶ್ರೀ ಧೀರೇಂದ್ರರು, ಶ್ರೀ ಸತ್ಯಭೋಧರು, ಶ್ರೀಸತ್ಯವರತೀರ್ಥರು, ಶ್ರೀ ವ್ಯಾಸತತ್ತ್ವಜ್ಞರು, ಶ್ರೀ ಮಾದನೂರು ವಿಷ್ಣುತೀರ್ಥರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ದಿವಾನ್ ಪೂರ್ಣಯ್ಯ, ಹೆಳವನಕಟ್ಟೆ ಗಿರಿಯಮ್ಮ, ಇತ್ಯಾದಿ.

ಒಟ್ಟು ಆಯುಸ್ಸು – 81 ವರ್ಷ. 17.9.1809ರಂದು ಇಹಲೋಕ ಯಾತ್ರೆ ಮುಗಿಸಿದರು.

ಆರು ಮೂರೆರಡೊಂದು ಸಾವಿರ
ಮೂರೆರಡು ಶತ ಶ್ವಾಸಜಪಗಳ
ಮೂರುವಿಧ ಜೀವರೊಳಗಬ್ಜಜ ಕಲ್ಪಪರಿಯಂತ
ತಾ ರಚಿಸಿ ಸಾತ್ವರಿಗೆ ಸುಖ ಸಂ–
ಸಾರ ಮಿಶ್ರರಿಗಧಮಜನರಿಗ–
ಪಾರ ದುಃಖಗಳೀವ ಗುರುಪವಮಾನ ಸಲಹೆಮ್ಮ

‘ಆರು ಮೂರು (6 x 3 = 18) ಮತ್ತು ಎರಡೊಂದು ಸಾವಿರ (2 + 1 = 3) ಒಟ್ಟು 21 ಸಾವಿರ ಮತ್ತು ಮೂರೆರಡು (3 x 2 = 6) ಶತ ಅಂದರೆ ಆರು ನೂರು, 21600 ಶ್ವಾಸಜಪಗಳನ್ನು ಸಾತ್ವಿಕ, ರಾಜಸ, ತಾಮಸ, ಎಂಬ ತ್ರಿವಿಧ ಜೀವರಲ್ಲಿ ಬ್ರಹ್ಮಕಲ್ಪ ಪರ್ಯಂತ ಪ್ರತಿದಿನ ತಾನು ಮಾಡಿ ಸಾತ್ವಿಕರಿಗೆ ನಿತ್ಯವಾದ ಮೋಕ್ಷಸುಖವನ್ನೂ, ರಾಜಸರಾದ ಮಿಶ್ರ ಜೀವರಿಗೆ ನಿತ್ಯ ಸಂಸಾರವನ್ನೂ, ತಾಮಸರಾದ ಅಧಮ ಜೀವರಿಗೆ ನಿತ್ಯವಾದ ಅಪಾರ ದುಃಖವನ್ನೂ ನೀಡುವ ಗುರು ಪವಮಾನನೆ, ನಮ್ಮನ್ನು ಸಲಹು.’

( ಶ್ರೀ ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )

ಸ್ಮರಿಸು ಗುರು ಸಂತತಿಯನು ಮನವೇ |ಪ|

ಸ್ಮರಿಸು ಗುರು ಸಂತತಿಯ ಸರ್ವಕಾಲಗಳಲ್ಲಿ
ಪೊರೆವ ಹರಿ ಚತುರವಿಧ ಪುರುಷಾರ್ಥಗಳನಿತ್ತು |ಅ.ಪ.|

ಪರಮಹಂಸಾಖ್ಯ ಹರಿ ಗುರುತಮನೆನಿಸುತಿಪ್ಪ
ಪರಮೇಷ್ಠಿ ತತ್ಸುತರು ಸನಕಾದ್ಯರಾ
ಕರಕಮಲ ಸಂಜಾತ ಕೂರ್ವಾಸ ಜ್ಞಾನನಿಧಿ
ಗರುಡವಾಹನ ತೀರ್ಥ ಕೈವಲ್ಯ ಯತಿವರರ | 1|
ಜ್ಞಾನೇಶ ಪರತೀರ್ಥ ಸತ್ಯ ಪ್ರಜ್ಞ ಪ್ರಾಜ್ಞ
ಸೂನು ಸುತಪೋರಾಜ ವರಕುಮಾರಾ
ಮೌನಿಕುಲವರ ಅಚ್ಯುತ ಪ್ರೇಕ್ಷರಂಘ್ರಿಗಳ
ಆ ನಮಿಪೆನನವರತ ಭಕ್ತಿ ಪೂರ್ವಕದೀ | 2 |

ಅಚ್ಛಿನ್ನ ಭಕ್ತ ಮರುತವತಾರ ಮಧ್ವಮುನಿ
ಪ್ರೋಚ್ಚಾಬ್ಜನಾಭ ನರಹರಿ ಮಾಧವಾ
ಸಚ್ಚರಿತ ಅಕ್ಷೊಭ್ಯ ಮುನಿಪ ಪ್ರತಿವಾದಿ ಭೂ
ತೋಚ್ಚಾಟನವಗ್ಯೆದ ಜಯತೀರ್ಥ ಗುರುವರರ । 3 |
ವಿದ್ಯಾಧಿರಾಜ ರಾಜೇಂದ್ರ ಸುತಪೋನಿಧಿ ಜ-
ಯಧ್ವಜರ ಪುರುಷೋತ್ತಮ ಬ್ರಹ್ಮಣ್ಯರಾ
ಮಧ್ವ ಸಿದ್ಧಾಂತ ಸ್ಥಾಪಕ ವ್ಯಾಸರಾಯ ಪ್ರ-
ಸಿದ್ಧ ಶ್ರೀನಿವಾಸಯತಿಗಳ ಪವಿತ್ರ ಪದ । 4 |
ಲಕ್ಷ್ಮೀ ಕಾಂತರನ ಶ್ರೀಪತಿ ರಾಮಚಂದ್ರರನ
ಲಕ್ಷ್ಮೀ ವಲ್ಲಭ ಲಕ್ಷ್ಮೀ ನಾಥಪತಿಯಾ
ಲಕ್ಷ್ಮೀ ನಾರಾಯಣರ ಶ್ರೀ ರಘುನಾಥ ಸು
ಭಿಕ್ಷುಗಳ ಜಗನ್ನಾಥ ಗುರುಗಳನಾ । 5 |
ಸಾನುರಾಗದಲಿ ಸರ್ವೋತ್ತಮನ ವಿ-
ಜ್ಞಾನ ಪೂರ್ವಕ ಭಜಿಸಿ ಸುಖಿಸುತಿಪ್ಪಾ
ಶ್ರೀನಾಥ ಗುರುವರರ ಕರಕಮಲಜಾತ ವಿ-
ದ್ಯಾನಾಥ ಯತಿಗಳನು ಅನುದಿನದಿ ಮರೆಯದಲೆ । 6 |
ವಿಧ್ಯಾಧಿರಾಜರ ಕವೀಂದ್ರ ವಾಗೀಶರ ಸ್ವ
ಸಿದ್ಧಾಂತ ಸ್ಥಾಪಿಸಿದ ರಾಮ ಚಂದ್ರಾ
ಅದ್ವೈತ ಕುಮುದ ದಿನಪ ವಿಬುಧೇಂದ್ರಾರ್ಯ
ಸದ್ವೈಷ್ಣವಾಗ್ರಣಿ ಜಿತಾಮಿತ್ರ ಮುನಿವರರ | 7 |
ರಘುನಂದನ ಸುರೇಂದ್ರ ವಿಜಯೀಂದ್ರ ಸುಧೀಂದ್ರ
ಸುಗುಣ ವಾರಿಧಿ ರಾಘವೇಂದ್ರಾರ್ಯರಾ
ನಿಗಮಾರ್ಥ ಕೋವಿದ ಸುಯೋಗೀಂದ್ರ ಸೂರೀಂದ್ರ
ಜಗತೀತಳದಿ ಪ್ರಸಿದ್ಧ ಸುಮತೀಂದ್ರರ | 8 |
ಸಾಧುಜನಸನ್ನುತ ಉಪೇಂದ್ರರಾಯರ ವೇದ
ವೇದಾಂಗ ಚತುರ ವಾದೀಂದ್ರ ಯತಿಯಾ

ಭೇದಮತ ವಾರಿನಿಧಿ ಚಂದ್ರ ವಸುಧೇಂದ್ರ ವಿ
ದ್ಯಾದಾನಾಸಕ್ತ ವರದೇಂದ್ರ ಯತಿವರರ | 9 |
ರಾಮವೇದವ್ಯಾಸರಂಘ್ರಿ ಕಮಲಗಳ ಹೃ
ತ್ತಾಮರಸದೊಳು ಪೂಜಿಸಿದ ಬಗೆಯನ್ನು
ಧೀಮಂತರಿಗೆ ತಿಳಿಸಲೋಸುಗದಿ ನವರತ್ನ
ಹೇಮ ಮಂಟಪ ವಿರಚಿಸಿದ ಭುವನೇಂದ್ರರಾ |10|
ಪವಮಾನ ಮತ ಪ್ರವರ್ತಕರೊಳುತ್ತಮರೆನಿಪ
ಭವ ಗೆದ್ದಾ ಸುಬೋಧ ಸುಜನೇಂದ್ರರಾ
ಅವನಿತ ದೊಳಗೆ ಅಭ್ಯಧಿಕರನ ಮಾಡಿ ಸ
ತ್ಕವಿಗಳನೆ ಸಂತೈಸಲೆಂದು ಸ್ಥಾಪಿಸಿದವರಾ | 11|
ಹರಿಯ ಸಂಸ್ಮರಣೆ ಅಹರ್ನಿಶಿಗಳಲಿ ಮಹ ವಿಪ
ತ್ಪರಿಹಾರಗೈಸುವುದು ಗುರುಗಳ ಸ್ಮರಣೇ
ಪರಮ ಸೌಖ್ಯವನೀವದಾದಾವ ಕಾಲದಲಿ
ಪೊರೆವ ಜಗನ್ನಾಥ ವಿಠ್ಠಲವೊಲಿದು ನಿರುತಾ |12|

### ರಾಗ – ಯದುಕುಲಕಾಂಬೋದಿ : ತಾಳ – ಅಟತಾಳ

ರಂಗವಲಿದ ರಾಯರ ನೀ ನೋಡೊ ಅಂತ ರಂಗದಿ ಪಾಡೊ । ಪ ।
ಭಂಗ ಪಡಿಪ ದುರಿತಂಗಳ ಈಡ್ಯಾಡೊ ಸತ್ ಸಂಗವ ಬೇಡೊ ।ಅಪ।
ಹಿಂದೆ ಮೂರೊಂದವತಾರ ಧರಿಸಿದಾತ ಇದು ಪಿರಿಯರ ಮಾತ
ಬಂದ ಮರಳಿ ಮಹೀತಳದಿ ಜಗನ್ನಾಥದಾಸಾರ್ಯ ಪ್ರಖ್ಯಾತ
ತಂದೆ ನಮಗೆ ತಿಳಿ ಎಂದೆಂದಿಗೂ ಈತ ಆನಂದ ಪ್ರದಾತ । ೧ ।
ಬಣ್ಣಿಸಲೆಗಿನ್ನೊಶವೆ ಇವರ ಚರಿಯ ಜಗದೊಳಗಾಶ್ಚರ್ಯ
ಕಣ್ಣುಗಳಿಂದ ಕಾಣುತ ಪೂರ್ಣಯ್ಯ ತಾನಾಗಿ ವಿಧೇಯ
ಧನ್ಯನೆನಿಸಿ ಸತ್ಪುಣ್ಯ ಪಡೆದುದರಿಯ ಪುಸಿಯಲ್ಲವೊ ಖರೆಯ । ೨ ।
ದಾಸಾರ್ಯರು ವಾಸಗೈದ ಸ್ಥಾನ ಗಯ ಕಾಶಿ ಸಮಾನ
ಲೇಸುಭಕ್ತಿಲಿ ಸೇವಿಸಲನುದಿನ ಕೊಡುವರು ಸುಜ್ಞಾನ

ಈ ಸನ್ಮಹಿಮರ ದೂಷಿಸುವನೆ ಶ್ವಾನ ಯಾತಕನುಮಾನ ।೩।
ನಿಗಮವಾಣಿಯನುಸಾರ ನಿರ್ಮಿಸಿರುವ ದೇಹಾಖ್ಯ ರಥವ
ಸೊಗಸಿಲಿಂದ ತಾನೇರಿ ನಗುತ ಬರುವ ಚತುರ್ದಿಕ್ಕಿಲಿ ಮೆರೆವ
ಮಿಗೆ ವಿರೋಧಿಸುವ ಪಗೆಗಳ ಪಲ್ಮುರಿವ ಪೊಗಳುವರಘ ತರಿವ ।೪।
ಶ್ಯಾಮಸುಂದರ ಸುಖತಾಮೃತ ಸಾರ ರಚಿಸಿದ ಬಹು ಚತುರ
ಪಾಮರ ಜನರನು ಪ್ರೇಮದಿ ಉದ್ಧಾರ ಮಾಡಲು ಗಂಭೀರ
ಶ್ರೀಮನ್ಮಾನವಿ ಕ್ಷೇತ್ರವೆ ನಿಜಾಗಾರ ಎಂದೆನಿಸಿದ ಧೀರ ।೫।

### ರಾಗ – ಪಂತುವರಾಳಿ : ತಾಳ – ಅಟತಾಳ

ನಾ ಧನ್ಯನಾದೆನಿಂದು ಸತ್ಯ
ಬೋಧರಾಯರ ದಿವ್ಯಪಾದಕಮಲವ ಕಂಡು ।ಪ।
ಹಿಂಗಿದುವಖಿಲದೋಷಂಗಳು ಈ ಮುನಿ
ಪುಂಗವರಂಘ್ರಿಸಂದರುಶನದಿ
ಗಂಗಾದಿ ತೀರ್ಥ ಭುಜಂಗಾದ್ರಿ ಮೊದಲಾದ
ತುಂಗಯಾತ್ರೆ ಫಲ ಸಮನೆನಿಸಿತು ।೧।
ದಾವಮುನಿಗಳೊ ದಾವ ದೇವತೆಗಳೊ
ದಾವರುಬಲ್ಲರು ಅವರಗತಿ
ಸೇವಿಪಜನರ ಕೃಪಾವಲೋಕನದಿಂದ
ಪಾವನಮಾಡುವ ಕೋವಿದಾರ್ಯರ ಕಂಡು ।೨।
ಸೀತಾರಮಣ ಜಗನ್ನಾಥವಿಟ್ಠಲರೇಯ
ಭೂತಳದೊಳು ಈ ಮಹಾತ್ಮರನು
ಪ್ರೀತಿಯಿಂದಲಿ ತಾ ಸೃಜಿಸಿದ ಜಗದಿ ಪು
ನೀತರ ಮಾಡಲು ತಾ ತಕ್ಷಣದಿ ।೩।

### ರಾಗ – ಆನಂದಭೈರವಿ : ತಾಳ – ಏಕತಾಳ

ರಾಯಬಾರೊ ತಂದೆತಾಯಿ ಬಾರೊ ನಮ್ಮನ್ ಕಾಯಿ ಬಾರೊ
ಮಾಯಿಗಳ ಮರ್ದಿಸಿದ ರಾಘವೇಂದ್ರ ರಾಯ ಬಾರೊ ।ಪ।
ಭಾಸುರಚರಿತನೆ ಭೂಸುರವಂದ್ಯನೆ
ಶ್ರೀಸುಧೀಂದ್ರಾರ್ಯರ ವರಪುತ್ರ ರಾಯ ಬಾರೊ

ಶ್ರೀಸುಧೀಂದ್ರಾರ್ಯರ ವರಪುತ್ರನೆನಿಸಿದ
ದೇಶಿಕರೊಡೆಯನೆ ರಾಘವೇಂದ್ರ ರಾಯ ಬಾರೊ ।೧।
ವಂದಿಪ ಜನರಿಗೆ ಮಂದಾರತರುವಂತೆ
ಕುಂದದಭೀಷ್ಟೆಯ ಸಲಿಸುತಿಪ್ಪ ರಾಯ ಬಾರೊ
ಕುಂದದಭೀಷ್ಟೆಯ ಸಲಿಸುತಿಪ್ಪ ಸುರಮಣಿ
ಮಂದನ ಮತಿಗೆ ರಾಘವೇಂದ್ರ ರಾಯ ಬಾರೊ ।೨।
ಆರು ಮೂರು ಏಳು ನಾಲ್ಕು ಎಂಟು ಗ್ರಂಥಸಾರಾರ್ಥ
ತೋರಿಸಿದಿ ಸರ್ವರಿಗೆ ನ್ಯಾಯದಿಂದ ರಾಯ ಬಾರೊ
ತೋರಿಸಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ
ಸೂರಿಗಳರಸನೆ ರಾಘವೇಂದ್ರ ರಾಯ ಬಾರೊ ।೩।
ರಾಮಪದಸರಸೀರುಹಭೃಂಗ ಭಕ್ತಕೃಪಾಪಾಂಗ
ಭ್ರಾಮಕಜನರ ಸನ್ಮಾನಭಂಗ ರಾಯ ಬಾರೊ
ಭ್ರಾಮಕಜನರ ಸನ್ಮಾನಭಂಗ ಮಾಡಿದ
ಧೀಮಂತರೊಡೆಯನೆ ರಾಘವೇಂದ್ರ ರಾಯ ಬಾರೊ ।೪।
ಭೂತಳನಾಥನ ಭೀತಿಯ ಬಿಡಿಸಿದೆ
ಪ್ರೇತತ್ವ ಕಳೆದೆ ಮಹಿಷಿಯ ರಾಯ ಬಾರೊ
ಪ್ರೇತತ್ವ ಕಳೆದೆ ಮಹಿಷಿಯ ಶ್ರೀ ಜಗ
ನ್ನಾಥವಿಟ್ಠಲನ ಪ್ರೀತಿಪಾತ್ರ ರಾಘವೇಂದ್ರ ರಾಯ ಬಾರೊ ।೫।

### ರಾಗ – ದೇಸ್ : ತಾಳ – ಆದಿತಾಳ

ರೋಗ ಹರನೆ ಕೃಪಾಸಾಗರ
ಶ್ರೀಗುರು ರಾಘವೇಂದ್ರ ಪರಿಪಾಲಿಸೊ ।ಪ।
ಸಂತತ ದುರ್ವಾದಿಧ್ವಾಂತ ದಿವಾಕರ
ಸಂತ ವಿನುತ ಮಾತ ಲಾಲಿಸೊ ।೧।
ಪಾವನಗಾತ್ರ ಸುದೇವವರ ತವ
ಸೇವಕರೊಳಗಾಡಿಸೊ ।೨।
ಘನ್ನಮಹಿಮ ಜಗನ್ನಾಥವಿಟ್ಠಲಪ್ರಿಯ
ನಿನ್ನಾರಾಧನೆ ಮಾಡಿಸೊ ।೩।

ರಾ ಗ – ಪೂ ರ್ವಿ : ತಾ ಳ – ಮ ಠ್ಯ ತಾ ಳ

ಯಾಕೆ ಮೂಕನಾದ್ಯೋ ಗುರುವೆ ನೀ
ಯಾಕೆ ಮೂಕನಾದ್ಯೋ । ಪ ।
ಯಾಕೆ ಮೂಕನಾದೆ ಲೋಕಪಾಲಕ ಎನ್ನ
ಸಾಕುವರ್ಯಾರಯ್ಯ ಶ್ರೀಕರ ರಾಘವೇಂದ್ರ । ಅ ಪ ।
ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದೆ
ಮಂದಿಯೊಳಗೆ ಎನ್ನ ಮಂದನ್ನ ಮಾಡಿದ್ಯೊ । ೧ ।
ಬೇಕಾಗದಿದ್ದರಿನ್ಯಾಕೆ ಕೈಯನು ಪಿಡಿದೆ
ಕಾಕುಜನರೊಳೆನ್ನ ನೂಕಿಬಿಟ್ಟು ನೀನು । ೨ ।
ಈಗ ಪಾಲಿಸದಿರೆ ಯೋಗಿಕುಲವರ್ಯ
ರಾಘವೇಂದ್ರನೆ ಭವ ಸಾಗುವದ್ಹ್ಯಾಂಗಯ್ಯ । ೩ ।
ನಿನ್ನಂಥ ಕರುಣೆಲ್ಲ ಎನ್ನಂಥ ಕೃಪಣೆಲ್ಲ
ಘನ್ನಮಹಿಮ ನೀ ಎನ್ನನು ಬಿಟ್ಟೀಗ । ೪ ।
ಜನನಿಯು ನೀ ಎನ್ನ ಜನಕನಯ್ಯ
ಮನ್ನಿಸೊ ನೀ ನಿತ್ಯಾನನ್ಯ ಶರಣನೆ । ೫ ।
ಎಂದಿಗಾದರು ನಿನ್ನ ಪೊಂದಿಕೊಂಡವನೆಲೊ
ಇಂದು ನೀ ಕೈಬಿಟ್ಟರೆನ್ನ ಮುಂದೆ ಕಾಯುವರ್ಯಾರೊ । ೬ ।
ನಾಥನು ನೀ ಅನಾಥನು ನಾನಯ್ಯ
ಪಾತಕರರಿ ಜಗನ್ನಾಥವಿಟ್ಠಲದೂತ । ೭ ।

ರಾ ಗ – ಸೌ ರಾ ಷ್ಟ್ರ : ತಾ ಳ – ಆ ದಿ ತಾ ಳ

ಪೊಂದಿ ಬದುಕಿರೊ ರಾಘವೇಂದ್ರರಾಯರ
ಕುಂದದೆಮ್ಮನು ಕರುಣದಿಂದ ಪೊರೆವರ । ಪ ।

ನಂಬಿ ತುತಿಸುವ ಜನಕದಂಬಕಿಷ್ಟವ
ತುಂಬಿಕೊಡುವನು ಅನ್ಯರ ಹಂಬಲೀಯನು । ೧ ।
ಅಲವಬೋಧರ ಸುಮತ ಜಲಧಿಚಂದಿರ
ಒಲಿದು ಭಕ್ತರ ಕಾವ ಸುಲಭ ಸುಂದರ । ೨ ।

ಗುರುಸುಧೀಂದ್ರರ ವಿಮಲಕರಜರೆನಿಪರ
ಸ್ಮರಿಸಿ ಸುರುಚಿರ ಚರಣಯುಗಳ ಪುಷ್ಕರ ।೩।
ಫಾಲಲೋಚನ ವಿನುತ ಮೂಲರಾಮನ
ಶೀಲಸದ್ಗುಣ ತುತಿಪ ಶೀಲರನುದಿನ ।೪।
ಭೂತಭಾವನ ಜಗನ್ನಾಥವಿಟ್ಠಲನ
ಪ್ರೀತಿಪಾತ್ರನ ನಂಬಿರೀತನೀಕ್ಷಣ ।೫।

ರಾಗ - ಶಂಕರಾಭರಣ : ತಾಳ - ಆದಿತಾಳ

ರಾಘವೇಂದ್ರ ಯತಿ ಸಾರ್ವಭೌಮ ದುರಿ-
ತೌಘ ದೂರ ತೇ ನಮೋ ನಮೋ
ಮಾಘದರಿಪು ಮತ ಸಾಗರ ಮೀನ ಮ-
ಹಾಘ ವಿನಾಶನ ನಮೋ ನಮೋ
ಶ್ಲಾಘಿತ ಗುಣಗಣ ಸೂರಿ ಪ್ರಸಂಗ ಸ-
ದಾಗಮಜ್ಞ ತೇ ನಮೋ ನಮೋ
ಮೇಘಶ್ಯಾಮಲ ರಾಮಾರಾಧಕ ಅ-
ಮೋಘ ಬೋಧತೇ ನಮೋ ನಮೋ ।೧।

ತುಂಗಭದ್ರ ಸುತರಂಗಿಣಿ ತೀರಗ
ಮಂಗಳ ಚರಿತ ಶುಭಾಂಗ ನಮೋ
ಇಂಗಿತಜ್ಞ ಕಾಳಿಂಗ ಮಥನ ಯದು-
ಪುಂಗವ ಹೃದಯ ಸುಸಂಗ ನಮೋ
ಸಂಗಿರ ಚಿನ್ಹಿತ ಶೃಂಗಾರಾನನ
ತಿಂಗಳ ಕರುಣಾಪಾಂಗ ನಮೋ
ಗಾಂಗೇಯ ಸಮಭಾಂಗ ಕುಮತ ಮಾ-
ತಂಗ ಸಂಘ ಶಿತಪಿಂಗ ನಮೋ ।೨।

ಶ್ರೀಸುಧೀಂದ್ರಕರಜಾತ ನಮೋ ನಮೋ
ಭೂಸುರ ವಿನುತ ವಿಖ್ಯಾತ ನಮೋ
ದೇಶಿಕವರ ಸಂಸೇವ್ಯ ನಮೋ ನಮೋ

ದೋಷ ವಿವರ್ಜಿತ ಕಾವ್ಯ ನಮೋ
ಕ್ಲೇಶಿತ ಜನ ಪರಿಪಾಲ ನಮೋ ನಮೋ
ಭಾಸಿತ ಕರುಣಾಶೀಲ ನಮೋ
ವ್ಯಾಸ ರಾಮಪದ ಭಕ್ತ ನಮೋ ನಮೋ
ಶಾಶ್ವತ ಧರ್ಮಾಸಕ್ತ ನಮೋ ನಮೋ ।೩।

ಕೋವಿದ ಮಸ್ತಕ ಶೋಭಿತಮಣಿ ಸಂ–
ಭಾವಿತ ಸುಮಹಿಮ ಪಾಲಯ ಮಾಂ
ಸೇವಾಪರ ಸರ್ವಾರ್ಥಪ್ರದ ವೃಂ–
ದಾವನ ಮಂದಿರ ಪಾಲಯ ಮಾಂ
ಭಾವಜ ಮಾರ್ಗಣ ಭುಜಗವಿನಾಯಕ
ಭಾವಜ್ಞ ಪ್ರಿಯ ಪಾಲಯ ಮಾಂ
ಕೇವಲ ನತಜನ ಪಾವನರೂಪಿ ಸ–
ದಾ ವಿನೋದಿ ಹೇ ಪಾಲಯ ಮಾಂ ।೪।
ಸನ್ನುತ ಮಹಿಮ ಜಗನ್ನಾಥವಿಟ್ಠಲ
ಸನ್ನಿಹಿತ ಮಾನಸ ಜಯಜಯ ಭೋ
ಚಿನ್ಹಿತ ಪುಂಡ್ರ ಕಮಂಡಲ ದಂಡ ಪ್ರ
ಪನ್ನ ಭಯಾಪಹ ಜಯಜಯ ಭೋ
ಮಾನ್ಯ ಮಹಾತ್ಮ ಪ್ರಸನ್ನವದನ ಕಾ–
ರುಣ್ಯ ಪಯೋನಿಧೆ ಜಯಜಯ ಭೋ
ಧನ್ಯ ಕ್ಷಮಾ ಸಂಪನ್ನ ಧರಾಮರ ಶ–
ರಣ್ಯ ಶಾಶ್ವತ ಜಯಜಯ ಭೋ ।೫।

---

ಸುರಪನಾಲಯದಂತೆ ಮಂತ್ರಾಲಯ
ಕರೆಸುವುದು ಕಂಗೊಳಿಸುವುದು ನೋಳ್ಪ ಜನಕೆ ।ಪ।

ಕಾಮಧೇನುವಿನಂತೆ ಇಪ್ಪ ಗುರುವರ ಸಾರ್ವ
ಭೌಮ ಸುಧೀಯೀಂದ್ರಸುತ ರಾಘವೇಂದ್ರ

ಆಮಯಾಧಿಪ ಖಳತಮಿಶ್ರ ಓಡಿಸುವ ಚಿಂ
ತಾಮಣಿ ಪ್ರಕಾಶದಂತಿಪ್ಪ ವೃಂದಾವನದಿ |1|

ಸುರತರುವಿನಂತಿಪ್ಪ ಕೀರ್ತಿ ಸಚ್ಛಾಯಾಶ್ರಿ
ತರ ಮನೋರಥಗಳನು ಪೂರೈಸುವಾ
ಧರಣಿಸುರಾಖ್ಯ ಷಟ್ಪದಗಳಿಗೆ ಸತ್ಯದಾ
ಪರಿಮಳದಿ ತೃಪ್ತಿಬಡಿಸುವ ಮರುತನಂತೆ |2|

ವಾರಾಹಿ ಎಂಬ ನಂದನ ವನದಿ ಜನರತಿ ವಿ
ಹಾರ ಮಾಳ್ಪರು ಸ್ನಾನಪಾನದಿಂದಾ
ಶ್ರೀ ರಾಘವೇಂದ್ರನಿಲ್ಲಿಪ್ಪ ಕಾರಣ ಪರಮ
ಕಾರುಣ್ಯ ನಿಧಿ ಜಗನ್ನಾಥ ವಿಠಲನಿಹನು |3|

---

ಒಂದು ಕ್ಷಣದಲಿ ವಾದಿರಾಜರ
ದ್ವಂದ್ವ ಪದವನು ಭಜಿಸುವವರಿಗೆ
ಬೆಂದು ಪೋಗ್ವುದು ಪೂರ್ವಜನ್ಮದ ದುರಿತ ಕಾನನವು । ಈ
ಮಂದಮತಿಗಳು ಬಲ್ಲರೇ ಗೋ–
ವಿಂದ ಭಕ್ತರ ಮಹಿಮೆಯನು
ಪುರಂದರಾದಿಗಳರಿವರಲ್ಲದೆ ಮಿಕ್ಕವರರಿಯಲಹುದೇ ॥
ಸಾರಕ್ರೋಡೀಕರಿಸಲನುದಿನ ।
ಸಾರೆವರ್ಣಾಭಿಮಾನಿ ದೀನೋ–
ದ್ಧಾರಗೋಸುಗ ಹರಿಕಥಾಮೃತಸಾರವನು ರಚಿಸಿ ॥
ಸ್ಥೈರ್ಯ ಮಾನಸದಿಂದ ಭಾವೀ ।
ಭಾರತೀಪತಿ ವಾದಿರಾಜರ ।
ಭೂರಿ ಕೋಶಕೆ ವೊಪ್ಪಿಸುತಲಾಪಾರಮುದ ಪಡೆದ ॥
(ಶ್ರೀ ಹರಿಕಥಾಸಾರಾಮೃತಸಾರ ಮಹಾತ್ಮೆ ಸಂಧಿ)

ರಾಗ – ಕಾಂಬೋದಿ : ತಾಳ – ಝಂಪೆ ತಾಳ

ಅಪಮೃತ್ಯು ಪರಿಹರಿಸೊ ಅನಿಲದೇವ

ಕೃಪಣವತ್ಸಲನೆ ಕಾವರ ಕಾಣೆ ಜಗದೊಳಗೆ ।ಪ।
ನಿನಗಿನ್ನು ಸಮರಾದ ಅನಿಮಿತ್ತ ಬಾಂಧವರು
ಎನಗಿಲ್ಲ ಆವಾವ ಜನುಮದಲ್ಲಿ
ಅನುದಿನವು ಎನ್ನನು ಉದಾಸೀನ ಮಾಡುವುದು
ಅನುಚಿತವು ಜಗದಿ ಸಜ್ಜನ ಶಿಖಾಮಣಿಯೆ ।೧।
ಕರಣಾಭಿಮಾನಿಗಳು ಕಿಂಕರರು ಮೂರ್ಲೋಕದರಸು
ಹರಿಯು ನಿನ್ನೊಳಗಿಪ್ಪ ಸರ್ವಕಾಲ
ಪರಿಸರನೆ ಈ ಭಾಗ್ಯ ದೊರೆತನಕೆ ಸರಿಯುಂಟೆ
ಗುರುವರ್ಯ ನೀ ದಯಾಕರನೆಂದು ಪ್ರಾರ್ಥಿಸುವೆ ।೨।
ಭವರೋಗ ಮೋಚಕನೆ ಪವಮಾನರಾಯ ನಿ–
ನ್ನವರವನು ನಾನು ಮಾಧವಪ್ರಿಯನೆ
ಜವನ ಬಾಧೆಯ ಬಿಡಿಸೊ ಅವನಿಯೊಳು ಸುಜನರಿಗೆ
ದಿವಿಜಗಣ ಮಧ್ಯದಲಿ ಪ್ರವರ ನೀನಹುದೊ ।೩।
ಜ್ಞಾನಾಯುರೂಪಕನು ನೀನಹುದೊ ವಾಣಿ
ಪಂಚಾನನಾದ್ಯಮರರಿಗೆ ಪ್ರಾಣದೇವ
ದೀನವತ್ಸಲನೆಂದು ನಾ ನಿನ್ನ ಮೊರೆಹೊಕ್ಕೆ
ದಾನವಾರಣ್ಯ ಕೃಶಾನು ಸರ್ವದಾ ಎನ್ನ ।೪।
ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು
ಸಾಧಾರಣವಲ್ಲ ಸಾಧು ಪ್ರಿಯನೆ
ವೇದವಾದೋದಿತ ಜಗನ್ನಾಥವಿಟ್ಠಲನ
ಪಾದಭಜನೆಯಿತ್ತು ಮೋದ ಕೊಡು ಸತತ ।೫।

### ರಾಗ – ಕಾಂಬೋದಿ : ತಾಳ – ಝಂಪೆ ತಾಳ

ಭಾರತೀರಮಣ ಸದ್ಭಕ್ತ ಬಂಧೋ ಈ
ಘೋರ ಭವಭಯ ಪರಾಭವಗೈಸು ಬೇಗ ।ಪ।
ಲೋಕಾಂತರಾತ್ಮಕನೆ ಈ ಕಮಲಜಾಂಡದೊಳು
ನಾ ಕಾಣೆ ನಿನ್ನುಳಿದು ಸಾಕುವವರ
ನೀ ಕೈಪಿಡಿದು ಕೃಪಾವಲೋಕನದಿ
ಭಕ್ತರಲಿ ಕರುಣವ ಮಾಡು ಮೈನಾಕಿವರಜನಕ ।೧।

ಅನಿಲ ಎಮ್ಮ ಅವಗುಣವೆಣಿಸುವರೆ ಕಡೆಯುಂಟೆ
ಕೊನೆಗೆ ನೀನೆ ಗತಿಯೊ ಅನಿಮಿಷೇಶ
ಜನನಿ ಜನಕ ಭ್ರಾತ ಜನಪ ಗುರು ವರಮಿತ್ರ
ಎನಗೆ ನೀ ಸಕಲ ಸೌಖ್ಯದನೆಂದು ಪ್ರಾರ್ಥಿಸಿದೆ ।೨।
ಹನುಮಭೀಮಾನಂದ ಮುನಿರಾಯ ನಿನ್ನ ಪ್ರಾ-
ರ್ಥನೆ ಗೈಯುವರು ವಾಣಿ ಫಣಿಪ ಮೃಡರು
ಅನಿಮಿತ್ತ ಬಾಂಧವ ಜಗನ್ನಾಥವಿಟ್ಠಲನ
ತನಯ ತಾಪಕರ ಬಂಧನ ಮೋಚನವಮಾಡೊ ।೩।

## ಗರುಡದೇವರು

ಅತಿ ಶೋಭಿಸುತಿದೆ ಶ್ರೀಪತಿವಾಹನ || ಪ ||
ಚತುರದಶ ಲೋಕದಲಿ ಅಪ್ರತಿವಾಹನ || ಅ ||
ವಿನುತಕಶ್ಯಪ ಮುನಿಗೆ ತನಯನೆನಿಸಿದ ವಾಹನ |
ಅನುಜರನು ಕದ್ರೊಯ್ದ ಅತ್ಯಾಢ್ಯ ವಾಹನ |
ವನದಿ ಮಧ್ಯದಿ ನಾವಿಕರ ಭಕ್ಷಿಸಿದ ವಾಹನ |
ಜನಪನಾಜ್ಞದಿ ಕೂರ್ಮಗಜರ ನುಂಗಿದ ವಾಹನ || 1 ||
ಕುಲಿಶಪಾಣಿಯ ಕೂಡೆ ಕಲಹ ಮಾಡಿದ ವಾಹನ |
ಒಳಹೊಕ್ಕು ಪೀಯೂಷ ತಂದ ವಾಹನ |
ಮಲತಾಯಿ ಮಕ್ಕಳನ್ನು ಮರುಳುಗೊಳಿಸಿದ ವಾಹನ |
ಬಲಿರಾಯ ಒಯ್ದ ಮುಕುಟವ ತಂದ ವಾಹನ || 2 ||
ಕಾಲನಾಮಕನಾಗಿ ಕಮಲಭವನಲಿ ಜನಿಸಿ |
ಕಾಲಾತ್ಮ ಹರಿಯ ಸೇವಿಪ ವಾಹನ |
ಕಾಳಗದಿ ಕಪಿವರರು ಕಟ್ಟುಬಿಡಿಸಿದ ವಾಹನ |
ವಾಲಖಿಲ್ಯರ ಪಿಡಿದ ವರವಾಹನ || 3 ||
ಕೂಪಾರದೆಡೆಗೆ ಮಂದರವೈದ ವಾಹನ ನಿಜ |
ರೂಪದಿ ಹರಿಸೇವಗೈವ ವಾಹನ |
ಆ ಪಿತೃಗಳಿಗಮೃತ ಪ್ರಾಪ್ತಿಸಿದ ವಾಹನ |
ಸೌಪರ್ಣಿ ಪತಿಯೆಂಬ ಹೊಂಬಣ್ಣ ವಾಹನ || 4 ||
ಪನ್ನ ಗಾಶನವಾಹನ ಪತಿತಪಾವನ ವಹನ |

ಸನ್ನುತಿಪ ಭಕ್ತರನು ಸಲಹುವ ವಾಹನ |
ಪನ್ನಗಾದ್ರಿನಿವಾಸ ಜಗನ್ನಾಥವಿಠ್ಠಲಗೆ |
ಉನ್ನತ ಪ್ರಿಯವಾದ ಶ್ರೀ ಗರುಡವಾಹನ || 5 ||

ಶ್ರೀ ಬ್ರ ಹ್ಮ ದೇ ವ ರು

ನಿರುಪಮಾನಂದಾತ್ಮಕ ಭವ ನಿ–
ರ್ಜರ ಸಭಾಸಂಸೇವ್ಯ ಋಜುಗಣ
ದರಸೆ ಸತ್ವ ಪ್ರಚುರ ವಾಣೀಮುಖ ಸರೋಜೇನ
ಗರುಡ ಶೇಷ ಶಶಾಂಕದಳ ಶೇ–
ಖರರ ಜನಕ ಜಗದ್ಗುರುವೆ ತ್ವ–
ಚ್ಚರಣಗಳಿಗಭಿವಂದಿಸುವೆ ಪಾಲಿಪುದು ಸನ್ಮತಿಯ

'ಹೇ ಆತ್ಮಭವ ಬ್ರಹ್ಮನೆ, ನಿರುಪಮ ಆನಂದವುಳ್ಳವನೇ, ದೇವತೆಗಳ ಸಭೆಗಳಲ್ಲೆಲ್ಲ ಚೆನ್ನಾಗಿ ಸೇವಿಸಲ್ಪಡುವವನೆ, ಋಜುಗಣದವರಲ್ಲೆಲ್ಲ ಉತ್ತಮನೆ, ಅಧಿಕಸತ್ವಗುಣಶಾಲಿಯೆ, ವಾಗ್ದೇವತೆಯ ಮುಖಕಮಲವನ್ನು ಅರಳಿಸುವ ಸೂರ್ಯನೆ, ಗರುಡ–ಶೇಷ–ರುದ್ರರಿಗೆ ಜನ್ಮವಿತ್ತ ತಂದೆಯೆ, ಜಗದ್ಗುರುವೆ, ನಿನ್ನ ಚರಣಗಳಿಗೆ ಅಭಿವಂದನೆ ಸಲ್ಲಿಸುತ್ತೇನೆ. ಸದ್ಬುದ್ಧಿ ನೀಡು. ಕಾಪಾಡು.

( ಶ್ರೀ ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )

ಮಹಾಲಕ್ಷ್ಮಿ

ಜಗದುದರನತಿ ವಿಮಲ ಗುಣ ರೂ–
ಪಗಳನಾಲೋಚನದಿ ಭಾರತ
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ
ಬಗೆಬಗೆಯ ನೂತನವ ಕಾಣುತ
ಮಿಗೆ ಹರುಷದಿಂ ಪೊಗಳಿ ಹಿಗ್ಗುವ
ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು

ಬ್ರಹ್ಮಾಂಡವನ್ನೇ ಉದರದಲ್ಲಿಟ್ಟುಕೊಂಡ ಶ್ರೀಮನ್ನಾರಾಯಣನ ಅನಂತಾನಂತ ಜ್ಞಾನ, ಆನಂದ ಮುಂತಾದ ಗುಣ ರೂಪಗಳನ್ನು ಆಲೋಚನೆಯಿಂದ, ಭಾರತಾದಿ ವೇದಗಳನ್ನು ಅಧಿಕವಾಗಿ ಚಿಂತಿಸುತ್ತ, ಹೊಸಹೊಸ ರೂಪಗಳನ್ನು, ಗುಣಗಳನ್ನು ಕಾಣುತ್ತ, ಬಹು ಸಂತಸದಿಂದ ಸ್ತುತಿಸುತ್ತ ಆನಂದಿಸುವ ಸತ್ವರಜಸ್ತಮೋ

ಗುಣಗಳಿಗೆ ಅಭಿಮಾನಿಯಾದ ಮಹಾಲಕ್ಷ್ಮಿ (ಶ್ರೀ ಭೂ ದುರ್ಗಾ ರೂಪಗಳುಳ್ಳ) ನಿರಂತರವೂ ನಮ್ಮನ್ನು ರಕ್ಷಿಸಲಿ

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಿಮಗೆಂಬ
ಸುಲಭನೊ ಹರಿ ತನ್ನವರನರೆ
ಘಳಿಗೆ ಬಿಟ್ಟಗಲನೊ ರಮಾಧವ
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ

ಪರಮಾತ್ಮನ ಭಜನೆ, ಸ್ತುತಿಗಳಿಗೆ ದೇಶ ಕಾಲ ಅವಸ್ಥೆಗಳ ನಿರ್ಬಂಧವಿಲ್ಲ. ಕರುಣಾಮೂರ್ತಿಯಾದ ಪರಮಾತ್ಮ ತನ್ನನ್ನು ಶ್ರದ್ಧೆ ಭಕ್ತಿಗಳಿಂದ ಸ್ಮರಿಸುವ-ವರನ್ನು ಎಂದಿಗೂ ಕೈ ಬಿಡನು. ಅವನ ಪ್ರಸನ್ನತೆಯನ್ನು ಪಡೆಯುವ ಉಪಾಯ-ವನ್ನರಿಯದೆ ಸುಮ್ಮನೆ ಜನ್ಮಜನ್ಮಗಳಲ್ಲಿ ಜನ ಬಳಲುತ್ತಾರೆ. ಆ ರಹಸ್ಯವನ್ನು ತಿಳಿದರೆ ಹರಿ ಸುಲಭನೆಂದು ಅರಿವಾಗುತ್ತದೆ. ಮಲಗಿ, ಕುಳಿತು, ನಿಂತು, ನಲಿದು, ಸ್ತುತಿಸಲು ಫಲಗಳೂ ಬೇರೆ ಬೇರೆ. ಆದರ ಮುಖ್ಯ. ಭೀಷ್ಮರು ಶರತಲ್ಪದಲ್ಲಿ ಮಲಗಿಯೇ ಮಾಡಿದ ಸ್ತೋತ್ರವನ್ನು ಕೃಷ್ಣ ಕುಳಿತೇ ಕೇಳಿದ. ಪುಂಡರೀಕ ಮಾತಾಪಿತೃ ಸೇವಾ ತತ್ಪರನಾಗಿದ್ದು ಕುಳಿತೇ ಪಾಡಿದುದನ್ನು ವಿಟ್ಠಲ ರೂಪದಿಂದ ನಿಂತು ಕೇಳಿದ. ಭಕ್ತ ಪ್ರಹ್ಲಾದ ನಿಂತು ಪಾಡಿದುದನ್ನು ನರಸಿಂಹ ರೂಪದಿಂದ ನಲಿದು (ಓಡಾಡುತ್ತ) ಆಲಿಸಿದ. ನಾರದರು ನಲಿದು ಪಾಡುವುದಕ್ಕೆ ಒಲಿದು ಅವರು ಇಚ್ಛಿಸಿದ ರೂಪ ತೋರಿ ಪ್ರಸನ್ನನಾಗುವನು. ( ಹ ರಿ ಕ ಥಾ ಮೃ ತ ಸಾ ರ - ಕ ರು ಣಾ ಸಂ ಧಿ )

ರಾ ಗ - ಶ ಂ ಕ ರಾ ಭ ರ ಣ : ತಾ ಳ - ಅ ಟ ತಾ ಳ

ಕೃಷ್ಣರಾಯನೆ ನಿನ್ನಯ ಕೃತ್ಯಂಗಳನೆಲ್ಲ
ಸೃಷ್ಟಿಯೊಳಗೆ ನಾನು ಬೀರಲ್ಯಾ ।ಪ।
ಶಿಷ್ಟರೊಳಗೆ ಇಟ್ಟು ಚಿರಕಾಲದಲೆನ್ನ
ಕಷ್ಟಬಿಡಿಸದೆ ಸುಮ್ಮನಿದ್ದೆಯ ।ಅ ಪ।
ಜನನ ಮರಣ ಶೂನ್ಯನೆನಿಸಿಕೊಂಡು ಗೋಪಿ
ತನಯನಾಗಿದ್ದುದು ಹೇಳಲ್ಯ

ಸನಕಾದಿಸೇವ್ಯ ಪೂಜ್ಯನೆ ತುರುಗಳ ಹಿಂಡು
ವನದಲ್ಲಿ ಕಾಯ್ದದ್ದು ಹೇಳಲ್ಯ ।೧।
ಧನುಜಭಂಜನನಾದ ಘನಮಹಿಮನೆ ಮಾಗ-
ಧನಿಗಂಜಿ ಓಡಿದ್ದು ಹೇಳಲ್ಯ
ಎಣೆಯಿಲ್ಲದ ಶೂರ ರಣದೊಳು ಪಾರ್ಥನಿಗೆ
ಅಣುಗನಾಗಿದ್ದದ್ದು ಹೇಳಲ್ಯ ।೨।
ಸತತ ತೃಪ್ತನಾಗಿ ಕ್ಷಿತಿಯೊಳು ಬೆಣ್ಣೆಯ
ಮಿತವಾಗಿ ಕದ್ದದ್ದು ಹೇಳಲ್ಯ
ಕೃತಿದೇವಿರಮಣನೆ ಅತಿ ಪ್ರೀತಿಯಲಿ ಗೋಪ
ಸತಿಯರ ಕೂಡಿದ್ದು ಹೇಳಲ್ಯ ।೩।
ಶ್ರುತಿತತಿಗಳಿಗಭೇದ್ಯ ಪ್ರತಿಯಿಲ್ಲದ ದೇವ
ಸತಿಗ್ವೊಶನಾದದ್ದು ಹೇಳಲ್ಯ
ಶತಕ್ರತು ವಿಧಿವಂದ್ಯ ಸುತರಾಪೇಕ್ಷಿಸಿ ಭೂತ
ಪತಿಯನ್ನು ಬೇಡಿದ್ದು ಹೇಳಲ್ಯ ।೪।
ಭೂತಳದೊಳು ದೇವತೆಗಳೊಡನೆ ಇಂಥ
ರೀತಿಲಿ ಚರಿಸಿದ್ದು ಹೇಳಲ್ಯ
ಭೀತಿರಹಿತ ಜಗನ್ನಾಥವಿಟ್ಠಲನೆ ಅ-
ದ್ಭುತ ಮಹಿಮನೆಂದು ಹೇಳಲ್ಯ ।೫।

## ರಾಗ – ಖರಹರಪ್ರಿಯ : ತಾಳ – ಆದಿತಾಳ

ಕಂಡೆ ಪಂಡರಿರಾಯನ ತನ್ನನು
ಕೊಂಡಾಡುವರ ಪ್ರಿಯನ ವಿಟ್ಠಲನ ।ಪ।
ಸಮಚರಣಾಂಬುಜನ ನಿಗಮಾ ಗಮತತಿಗೆ ಗೋಚರನ ವಿಟ್ಠಲನ
ಅಮಿತಪರಾಕ್ರಮನ ರುಕ್ಮಿಣಿ ರಮಣ ಸುಲಕ್ಷಣನ ವಿಟ್ಠಲನ ।೧।
ಕಾಮಿತಾರ್ಥಪ್ರದನ ಸಿರಿತುಲಸೀ ಧಾಮ ವಿಭೂಷಣನ
ಸಾಮಜಪತಿಪಾಲನ ತ್ರೈಜಗತ್ಸ್ವಾಮಿ ಚಿತ್ಸುಖಮಯನ ವಿಟ್ಠಲನ ।೨।
ಶ್ವೇತವಾಹನ ಸಖನ ಸತಿಗೆ ಪಾರಿಜಾತವ ತಂದಿತ್ತನಾ ವಿಟ್ಠಲನ
ವೀತಶೋಕ ಭಯನ ಶ್ರೀಜಗನ್ನಾಥವಿಟ್ಠಲರೇಯನ ।೩।

ಉ ಗಾ ಭೋ ಗ : ರಾ ಗ – ದೇ ಶ್

ಆರು ವಂದಿಸಲೇನು ಆರು ನಿಂದಿಸಲೇನು
ಆರು ಶಾಪಿಸಲೇನು ಆರು ಕೋಪಿಸಲೇನು
ಆರು ಮುನಿದು ಮಾತನಾಡದಿದ್ದರೇನು
ಮಾರುತಾಂತರ್ಯಾಮಿ ಜಗನ್ನಾಥವಿಟ್ಠಲನ
ಕಾರುಣ್ಯಪಾತ್ರರ ಕರುಣವೆನ್ನೊಳಗಿರೆ

---

**ಪಾಲಿಸೊ ನರಸಿಂಹ ಪಾಲಿಸೊ । ಪ ।**

**ಪಾಲಿಸೊ ಪರಮ ಪಾವನ್ನ ಕಮ**
**ಲಾಲಯ ನಂಬಿದೆ ನಿನ್ನ ಆಹ**
**ಬಾಲೇಂದುಕೋಟಿಯ ಸೋಲಿಪ ನಖ ತೇಜ**
ಮೂಲೋರ್ಕ**ದರಸೆ ನೀನಾಲಯ ಬಿಡದಲೆ ।ಅ.ಪ।**
**ಹಿಂದೆ ಪ್ರಹ್ಲಾದನ ಮೊರೆಯ ಕೇಳಿ**
**ಬಂದು ಕಾಯಿದೆ ಭಕ್ತ ಪ್ರಿಯ ಸುಖ**
**ಸಂದೋಹ ಮೂರುತಿ ಆಯ ತಾಕ್ಷ**
**ಎಂದೆಂದು ಬಿಡದಿರು ಕೈಯ ಆಹ**
**ವೃಂದಾರ ಕೇಂದ್ರಗೆ ಬಂದ ದುರಿತಂಗಳ**
**ಹಿಂದೆ ಮಾಡಿ ಕಾಯ್ದೆ ಇಂದಿರಾರಮಣನೆ । 1 ।**
**ಹರಣದಲ್ಲಿ ನಿನ್ನ ರೂಪ ತೋರಿ**
**ಪರಿಹರಿಸೊ ಎನ್ನ ಪಾಪ ದೂರ**
**ದಿರದಿರು ಹರಿಸಪ್ತ ದ್ವೀಪಾಧಿಪ**
**ಸಿರಿಪತಿ ಭಕ್ತ ಸಲ್ಲಾಪ ಆಹ**
**ಕರಣಶುದ್ಧನ ಮಾಡಿ ಕರೆಯೊ ನಿನ್ನ ಬಳಿಗೆ**
**ನರಕಂಠೀರವ ದೇವ ಚರಣ ಆಶ್ರೈಸಿದೆ । 2 ।**
**ಶರಣ ಪಾಲಕನೆಂಬೊ ಬಿರುದು ಕೇಳಿ**
**ತ್ವರಿತದಿ ಬಂದೆನೊ ಅರಿದು ಇನ್ನು**

ಪರಿ ಪರಿ ಅಪರಾಧ ಜರಿದು
ಪರತರನೆ ನೋಡೆನ್ನ ಕಣ್ತೆರೆದು ಆಹ
ಮರಣ ಜನನಂಗಳ ತರಿದು ಬಿಸುಟು ನಿನ್ನ
ಶರಣರ ಸಂಗದಲ್ಲಿರಿಸಿ ಉದ್ಧರಿಸೆನ್ನ |3|
ಸಂಸಾರ ಸಾಗರ ದೊಳಗೆ ಎನ್ನ
ಹಿಂಸೆ ಮಾಡುವರೇನೊ ಹೀಂಗೆ ನಾನು
ಕಂಸಾರಿ ಅನ್ಯರಿಗೆ ಬಾಗೆ ಮತ್ತೆ
ಸಂಶಯವಿಲ್ಲ ಮಾತಿಗೆ ಆಹ
ಹಂಸ ಡಿಬಿಕರನ್ನು ಧ್ವಂಸ ಮಾಡಿದ ಶೌರಿ
ಶಿಂಶುಮಾರ ಮೂರ್ತಿ ದಿವಸ ದಿವಸದಲ್ಲಿ |4|
ಸಿರಿಬೊಮ್ಮ ಭವ ಶಕ್ರಾದ್ಯಮರ ಕೈಯ
ನಿರುತ ತುತಿಸಿಕೊಂಬ ಧೀರ ಶುಭ
ಪರಿಪೂರ್ಣ ಗುಣ ಪಾರಾವರ ಭಕ್ತ
ವಾರಿನಿಧಿಗೆ ಚಂದಿರ ಆಹ
ಸ್ಮರನ ಕಾಂತಿಯ ನಿರಾಕರಿಸುವ ತೇಜನೆ
ಎರವು ಮಾಡದೆ ಹೃತ್ಸರಸಿಜದೊಳು ತೋರಿ |5|
ಮೊದಲು ಮತ್ಸ್ಯಾವತಾರದಿ ವೇದ
ವಿಧಿಗೆ ತಂದಿತ್ತ ವಿನೋದಿ ಶ
ರಧಿಯೊಳು ಸುರರಿಗೋಸ್ಕರದಿ ನೀನು
ಸುಧೆಯ ಸಾಧಿಸಿ ಉಣಿಸಿದೆ ಆಹ
ಅದುಭೂತ ಭೂಮಿಯ ತೆಗೆದೊಯ್ದುವನ ಕೊಂಡು
ಮುದದಿ ಹಿರಣ್ಯಕನುದರ ಬಗಿದ ಧೀರ |6|
ಬಲಿಯ ಮನೆಗೆ ಪೋಗಿ ದಾನ ಬೇಡಿ
ತುಳಿದೆ ಪಾತಾಳಕ್ಕೆ ಅವನ ಪೆತ್ತ
ವಳ ಶಿರ ತರಿದ ಪ್ರವೀಣ ನಿನ್ನ
ಬಲಕೆಣೆಗಾಣೆ ರಾವಣನ ಆಹ

ತಲೆಯನಿಳುಹಿ ಯದುಕುಲದಿ ಜನಿಸಿ ನೀನು
ಲಲನೇರ ವ್ರತವಳಿದಾಶ್ವಾರೂಢನೆ |7|
ಮಾನಸ ಪೂಜೆಯ ನೀ ದಯದಿ ಇತ್ತು
ಶ್ರೀನಾಥ ಕಳೆ ಭವವ್ಯಾಧಿ ಕಾಯೋ
ಅನಾಥ ಬಂಧು ಸುಮೋದಿ ಚತುರಾ
ನನಪಿತ ಕೃಪಾಂಬುಧಿ ಆಹ
ತಾನೊಬ್ಬರನರಿಯೆ ದಾನ ವಿಲೋಲನೆ
ಏನು ಮಾಡುವ ಸಾಧನ ನಿನ್ನದೊ ಹರಿ |8|
ನಿನ್ನ ಸಂಕಲ್ಪವಲ್ಲದೆ ಇನ್ನು
ಅನ್ಯಥಾವಾಗಬಲ್ಲುದೆ ಹೀಂಗೆ
ಚೆನ್ನಾಗಿ ನಾ ತಿಳಿಯದೆ ಮಂದ
ಮಾನವನಾಗಿ ಬಾಳಿದೆ ಆಹ
ಎನ್ನಪರಾಧವ ಇನ್ನು ನೀ ನೋಡದೆ
ಮನ್ನಿಸಿ ಕಾಯೋ ಜಗನ್ನಾಥ ವಿಠಲ |9|

## ರಾಗ – ಮಧ್ಯಮಾವತಿ : ತಾಳ – ಅಟತಾಳ

ರುದ್ರಾಂತರ್ಗತ ನಾರಸಿಂಹ ಪಾಹಿ
ಭದ್ರಮೂರುತಿ ನಿರ್ಗತಾಂಹ್ವ ।ಪ।
ಹೃದ್ರೋಗಕಳೆದು ಜ್ಞಾನಾರ್ದ್ರಸ್ವಾಂತನ ಮಾಡು
ಪದ್ರಸಾಮಗಘ ಸಮುದ್ರ ದಾಟಿಸಿ ಬೇಗ ।ಅ ಪ।
ಏಸೇಸು ಕಲ್ಪಗಳಲ್ಲಿ ನಿನ್ನ ದಾಸನಾನೆಂಬುದ ಬಲ್ಲಿ
ಈಶ ನೀನೆಂಬುದು ಲೇಶವರಿಯೆ ಕ್ಲೇಶನಾಶನ ಪ್ರಭುವೆ
ವಾರಾರಿಜೆ ವಲ್ಲಭ ವಾಸವಾನುಜ ವನಧಿಶಯನ
ಮಹೇಶವಂದಿತ ವರದ ಹೇ ಕರುಣಾ ಸಮುದ್ರ
ಕರಾಳವದನನೆ ನೀ ಸಲಹದಿರೆ ಕಾಣೆ ಕಾವರ ।೧।
ಹೇಮಕಶ್ಯಪು ತನ್ನ ಸುತನ ನೋಯಿಸೆ
ಶ್ರೀಮನೋಹರನೆ ಆನತನ್ನ

ವ್ಯೋಮ ಪರ್ವತ ಅಂಬುಧಿಧಾಮದೊಳುಳುಹಿ
ಭೂಮ ಮುನಿಗಣಸ್ತೋಮವಂದಿತಪಾದ
ಸಾಮಜೇಂದ್ರನ ಸರಸಿಯೊಳು ಸು-
ತ್ರಾಮನಂದನನಾ ರಣದಿ ಕುರು
ಭೂಮಿಪತಿ ಸಭೆಯೊಳಗೆ ದ್ರೌಪದಿಯ
ಆ ಮಹಾತ್ಮರ ಕಾಯ್ದ ಕರುಣಿ ।೨।
ವೇದಗಮ್ಯ ವೇದವ್ಯಾಸ ಕಪಿಲ
ಯಾದವೇಶ ಮಹಿದಾಸ
ಶ್ರೀದ ಶ್ರೀಷ ಅನ್ನಾದಿ ವಿಶ್ವಧನ್ವಂತ್ರಿ
ಮೇಧಾವಿಪತಿ ವಾಮನಾದಿರೂಪಕ ವಿಷ್ಣು
ಕಾದುಕೊ ನೀನವರ ಮನದ ವಿ-
ಷಾದ ರೋಗಂಗಳನು ಅಳಿದು ಮಹ-
ದಾದಿದೇವ ಜಗನ್ನಾಥವಿಟ್ಠಲ
ಆದರದಿ ಪ್ರಹ್ಲಾದ ವರದ ।೩।

## ರಾಗ – ಶಂಕರಾಭರಣ : ತಾಳ – ಅಟತಾಳ

ನರಸಿಂಹ ಪಾಹಿ ಲಕ್ಷ್ಮೀನರಸಿಂಹ ।ಪ।
ನರಸಿಂಹ ನಮಿಪೆ ನಾ ನಿನ್ನ ಚಾರು
ಚರಣಕಮಲಕೆ ನೀ ಎನ್ನ ಆಹ
ಕರವ ಪಿಡಿದು ನಿಜ ಶರಣನೆಂದೆನಿಸು ಭಾ-
ಸುರ ಕರುಣಾಂಬುಧಿ ಗರುಡ ವಾಹನ ।ಅ ಪ।
ತರಳ ಪ್ರಹ್ಲಾದನ ನುಡಿಯ ಕೇಳಿ
ತ್ವರಿತದಿ ಬಂದೆ ಎನ್ನೊಡೆಯ ಏನು
ಕರುಣಾಳು ಭಕ್ತರ ಭಿಡೆಯ ಮೀರ-
ಲರಿಯೆನೆಂದೆಂದು ಕೆಂಗಿಡಿಯ ಆಹ
ಭರದಿಂದುಗುಳುತ ಬೊಬ್ಬಿರಿದು ಬೆಂಬತ್ತಿ ಕ-
ರ್ಬುರಕಶಿಪುವಿನ ಹಿಂಗರುಳ ಪಿಡಿದೆ ಲಕ್ಷ್ಮೀ ।೧।
ಪ್ರಳಯಾಂಬುನಿಧಿಘನಘೋಷದಂತೆ
ಘುಳಿಘುಳಿಸುತಲಿ ಪ್ರದೋಷಕಾಲ

ತಿಳಿದು ದೈತ್ಯನಲ್ಲತಿ ರೋಷದಿಂದ–
ಪ್ಪಳಿಸಿ ಮೇದಿನಿಗೆ ನಿರ್ದೋಷ ಆಹ
ಸೆಳೆಸೆಳೆಯುತ ಚರ್ಮಸುಲಿದು ಕೆನ್ನೆತ್ತರೋ
ಕುಳಿಯನಾಡಿದೆ ದಿಶಾವಳಿಗಳೊಳಗೆ ಲಕ್ಷ್ಮೀ ।೨।
ಕ್ರೂರದೈತ್ಯನ ತೋರಗರುಳ ತೆಗೆ–
ದ್ವಾರ ಮಾಡಿದೆ ನಿಜಕೊರಳ ಕಂಡು
ವಾರಿಜಾಸನ ಮುಖ್ಯರರಳ ಪುಷ್ಪ
ಭೂರಿಗರೆಯೆ ವೇಗ ತರಳ ಆಹ
ಧೀರ ಪ್ರಹ್ಲಾದಂಗೆ ತೋರಿ ತ್ವದಂಘ್ರಿಸ–
ರೋರುಹವನೆ ಕಾಯ್ದ ಕಾರುಣ್ಯನಿಧಿ ಲಕ್ಷ್ಮೀ ।೩।
ಜಯಜಯ ದೇವವರೇಣ್ಯ ಮಹ
ದ್ಭಯನಿವಾರಣ ಅಗ್ರಗಣ್ಯ
ಗುಣತ್ರಯ ದೂರ ದುರಿತಾರಣ್ಯ ಧನಂ–
ಜಯ ಜಗದೇಕ ಶರಣ್ಯ ಆಹ
ಲಯವಿವರ್ಜಿತ ಲೋಕತ್ರಯ ವ್ಯಾಪ್ತ ನಿಜಭಕ್ತ
ಪ್ರಿಯ ಘೋರಾಮಯ ಹರ ದಯಮಾಡೆನ್ನೊಳು ಲಕ್ಷ್ಮೀ ।೪।
ಕುಟಿಲದ್ವೇಷದವ ನೀನಲ್ಲ ನಿನ್ನಾ–
ರ್ಭಟಕಂಜಿದರು ಸುರರೆಲ್ಲ ನರ
ನಟನೆ ತೋರಿದ್ಯೊ ಲಕ್ಷ್ಮೀನಲ್ಲ ನಾ ಪಾ–
ಸಟೆಗಾಣೆನಪ್ರತಿಮಲ್ಲ ಆಹ
ವಟಪತ್ರಶಯನ ಧೂರ್ಜಟಿವಂದ್ಯ ಜಗನ್ನಾಥ
ವಿಟ್ಠಲ ಕೃತಾಂಜಲಿಪುಟದಿ ಬೇಡುವೆ ।೫।

---

ನೀರ ತರಂಗಿಣಿ ತೀರ ನಾರಸಿಂಹ||ಪ||

ಸಾರಿದೆನೊ ತವಪಾದ ಪಂಕಜ
ತೋರು ಮನದಲಿ ತವಕದಿ|ಅ,ಪ|

ನಾರದನುತ ಚಿಚ್ಛರೀರವ ಶ್ರೀ ಭೂದು
ರ್ಗಾರಮಣ ದುರಿತಾರಿ ಬ್ರಹ್ಮ ಸ
ಮೀರ ಮುಖ ವಿಬುಧಾರ್ಚಿತ
ಚಾರು ಚರಣಯುಗ ಕ್ಷೀರಾಬ್ಧಿ ಶಯನ ಮ
ದ್ಧಾರ ನಿನ್ನದು ಮೂರು ಲೋಕದ
ಸೂರಿಗಮ್ಯ ಸುಖಾತ್ಮಕ|೧|

ವೇದವೇದ್ಯ ಸಂಸಾರೋದಧಿ ತಾರಕ
ಭೇದ ಭೇದ ವಿಷಾದವೇ ಮೊದ
ಲಾದ ದೋಷವರ್ಜಿತ
ಶ್ರೀದ ಶ್ರೀಶ ಅನಂತ ಅಪ್ತಕಾಮ
ಬಾದರಾಯಣ ಭಕ್ತವರ ಪ್ರ
ಹ್ಲಾದಪೋಷಕ ಪಾಹಿ ಮಾಂ|೨|

ಹೋತಹೃದ್ಯ ಜಗನ್ನಾಥವಿಠಲ ನಿನ್ನ
ಮಾತು ಮಾತಿಗೆ ಸ್ಮರಿಸುತಿಹ ಸ
ಚ್ಚೇತನರನು ನೀ ಸರ್ವದಾ
ವೀತಶೋಕ ಭವಭೀತಿ ಬಿಡಿಸಿ ತವ
ದೂತರೊಳಗಿಡು ಮಾತರಿಶ್ವಗ
ಭೂತಭಾವನ ಭವ್ಯದ|೩|

---

ಕರುಣಿಸೆನಗಿನಿತು ಕರುಣಾರ್ಣವನೆ ನಿನ್ನ
ಚರಣಾಬ್ಜದಲಿ ಭಕುತಿ ವಿಷಯದಿ ವಿರಕುತಿ||ಪ||

ಬಿಂಬನೇ ಸರ್ವ ಪ್ರಯೋಜನ ಮಾಡಿ ಪ್ರತಿ
ಬಿಂಬರಿಗೆ ತತ್ಫಲಗಳೀವ ಕಾವ
ಬಿಂಬನೆ ಸ್ವತಂತ್ರ ಪ್ರತಿಬಿಂಬಾ ಸ್ವತಂತ್ರತಮ

ನೆಂಬ ಸುಜ್ಞಾನ ಪೂರ್ವಕ ನಿನ್ನ ಭಜಿಪ ಸುಖ|೧|

ಕಾರ್ಯ ಕಾರಣ ಅಂಶಿ ಅಂಶಾವತಾರ ಅಂ
ತರ್ಯಾಮಿ ವ್ಯಾಪ್ಯ ವ್ಯಾಪಕ ಪ್ರೇರಕ
ಪ್ರೇರ್ಯ ಬಾಧಕ ಬಾಧ್ಯ ಪೋಷ್ಯ ಪೋಷಕ ರೂಪ
ಆರ್ಯರಿಂದರಿತು ಅನುದಿನದಿ ಸುಖಿಸುವ ಭಾಗ್ಯ|೨|

ತಾರತಮ್ಯದ ಜ್ಞಾನ ದುರ್ವಿಷಯಗಳಲಿ ಸ
ದ್ವೈರಾಗ್ಯ ಹರಿದ್ವೇಷಿಗಳಲಿ ದ್ವೇಷಾ
ಸೂರಿಗಳ ಸಂಗ ಗುಣರೂಪಕ್ರಿಯೆಗಳನು ಸುವಿ
ಚಾರಗೈಯುತ ನಿತ್ಯ ಅನುಮೋದ ಬಡುವಂತೆ|೩|

ಮಿಂದೋದಕಗಳೆಲ್ಲ ಮಜ್ಜನವು ದೇಹಾನು
ಬಂಧಿ ಜನರೆಲ್ಲ ನಿನ್ನ ಪರಿವಾರವು
ನಿಂದ್ಯ ಕರ್ಮಗಳೆಲ್ಲ ಪಾದುಕಗಳೆಂಬ ಅನು
ಸಂಧಾನ ಮನಕೆ ನಿತ್ಯದಲಿ ಬರುವಂತೆ|೪|

ಚೇತನಾಚೇತನಗಳೆರಡು ಪ್ರತಿಮೆಗಳು ಸಂ
ಪ್ರೀತಿಯಲಿ ಸುರಕ್ಷಿಸುವುದು ಪೂಜೆ
ಈ ತನುವೆ ಸದನವೆಂದರಿತು ನಿತ್ಯದಿ ಜಗ
ನ್ನಾಥವಿಠಲನೆಂಬ ವಿಷಯವೇ ಮುಖ್ಯವೆಂದು |೫|

---

ಶ್ರೀನಿಕೇತನ ಪಾಲಯ ಮಾಂ | ಪ |

ಜ್ಞಾನಗಮ್ಯ ಕರುಣಾನಿಧೆ ನಿನ್ನಡಿ
ಗಾನಮಿಸುವೆ ಪೊರೆ ದೀನ ದಯಾಳೊ | ಅ |

ಜ್ಞಾನ ಮಾನದ ಶರಣರ ಸುರಧೇನು ಸರ್ವದಾ

ನೀನೆಂದರಿದು ಸದಾನುರಾಗದಲಿ

ಧೇನಿಪೆ ಮನದನುಮಾನವ ಕಳೆಯೋ | 1 |

ಶ್ರೀ ಕರಾರ್ಚಿತ ಪದಾಬ್ಜ ಪರಾಕು ಅಚ್ಯುತ

ಶೋಕನಾಶನ ವಿಶೋಕ ಸುಲಭ ಹೃದ್

ವ್ಯಾಕುಲ ಕಳೆ ಏಕ ಪ್ರಕಾರದಿ ಒಲಿದು | 2 |

ಪನ್ನಗಾಚಲ ನಿವಾಸ ಪ್ರಪನ್ನ ವತ್ಸಲಾ

ಬಿನ್ನಪ ಕೇಳು ಜಗನ್ನಾಥ ವಿಠ್ಠಲ

ಧನ್ಯನಮಾಡು ಶರಣ್ಯ ಶರಣನ | 3 |

---

ರಾಮನ ನೋಡಿರೈ ನಿಮ್ಮಯ ಕಾಮಿತ ಬೇಡಿರೈ

ತಾಮರಸಸಖ ಸುವಂಶಾಬ್ಧಿಶರತ್ಸೋಮ ಕಮಲಾಧಾಮ ||ಪ||

ಧಾತನನುಜ್ಞದಿ ದೇವತ್ವಷ್ಟ್ರ ನಿರ್ಮಿಸಿದ ಅಜ ಪೂಜಿಸಿದ

ಜ್ಯೋತಿರ್ಮಯ ಜಾಬಾಲಿ ಮುನಿಯ ತಪವರಿದ ಕಾಮಿತ ನೆರೆದ

ಭೂತಾಧಿಪನ ಭವನದೊಳಗರ್ಚನೆಗೊಂಡ ಧೃತಕೋದಂಡ

ಮಾತಂಗಾರಿ ವಿರೋಧಿಯ ಜನಕನ ಮೇಧಾ ಕಾರಕೆ ಪೋದ ||೧||

ಸೌಭರಿ ಮುನಿಪಗೆ ಸೌಖ್ಯವ ಕರುಣಿಸಿಕೊಟ್ಟ ಜಗಕತಿದಿಟ್ಟ

ನಾಭಿಜನ್ಮನಿಹ ನಗರಾಸ್ಥಾನಕೆ ಬಂದ ಶುಭಗುಣವೃಂದ

ವೈಭವದಿಂದ ಅಯೋಧ್ಯಾನಗರದಿ ಮೆರೆದ ಕಾಮಿತಗರೆದ

ಸಾಭಿಮಾನದಲಿ ಸತಿಯಳಿಗಿತ್ತನು ವರವ ದೇವರದೇವ ಗರುವ ||೨||

ಜಾಂಬವಂತನಿಗೆ ಜಾನಕಿರಮಣನು ಈತ ನಿತ್ತನುಧ್ಯಾತಾ

ಸಂಭ್ರಮದಲಿ ವೇದಗರ್ಭಮೊಡನಾಡ್ದ ಮುಕ್ತಿಯ ನೀಡ್ದ

ಕುಂಭಿನೀಶ್ವರನ ಕೋಶದಿ ಬಹುದಿನವಾಸ ವೆಸಗಿದನೀಶ

ನಂಬಿ ತುತಿಸುತಿಹ ನರಹರಿ ಮುನಿಪಗೆ ಒಲಿದ ಮೋದದಿ ನಲಿದ ||೩||

ಅಲವ ಬೋಧಮುನಿ ಅತಿ ಮೋದದಲರ್ಚಿಸಿದ ಸಲೆ ಮೆಚ್ಚಿಸಿದ

ಇಳೆಯೊಳು ಬಹುಯತಿಗಳ ಕರಪೂಜಿತನಾದ ಲೀಲಾವಿನೋದ
ಬಲು ನಂಬಿದ ಭಕುತರ ಕಲಿ-ಮಲಗಳ ಕಳೆದ ಮನದೊಳು ಪೊಳೆದ
ಸುಲಲಿತಗುಣನಿಧಿ ವಸುಧೇಂದ್ರಾರ್ಯರ ಪ್ರಿಯ ಕವಿಜನಗೇಯ ||೪||

ವಾರಿಧಿ ಬಂಧನ ವಾನರ ನಾಯಕನಾಳ್ದಾ ದೈತ್ಯರ ಸೀಳ್ದ
ನಾರದಮುಖ ಮುನಿನಮಿತಾ ಪದಾಂಬುಜನೀತ ತ್ರಿಗುಣಾತೀತ
ಆರಾಧಿಪರಿಗೆ ಅಖಿಳಾರ್ಥಗಳನು ಕೊಡುವ ದುರಿತವ ತಡೆವ
ನೀರಜಾಕ್ಷ ಜಗನ್ನಾಥವಿಠಲ ನಿಶ್ಚಿಂತ ಸೀತಾಕಾಂತ ||೫||

---

## ರಾಗ – ಶಂಕರಾಭರಣ : ತಾಳ – ಆದಿತಾಳ

ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ
ಸಂಗ ಸುಖವಿತ್ತು ಕಾಯೊ ಕರುಣಾಸಾಗರ । ಪ ।
ಅರಿಯರೊ ನೀನಲ್ಲದೆ ಮತ್ತನ್ಯದೈವರ
ಮರೆಯರೊ ನೀ ಮಾಡಿದ ಅನಿಮಿತ್ತುಪಕಾರ
ತೊರೆಯರೊ ನಿನ್ನಂಘ್ರಿಸೇವೆ ಪ್ರತಿವಾಸರ
ಬೆರೆಯರೊ ಪರತತ್ವವಲ್ಲದ ಇತರ ವಿಚಾರ । ೧ ।
ಮೂಕ ಬಧಿರರಂತಿಪ್ಪರೊ ನೋಳ್ಪ ಜನಕೆ
ಕಾಕುಯುಕುತಿಗಳನ್ನವರು ತಾರರೊ ಮನಕೆ
ಸ್ವೀಕರಿಸರನರ್ಪಿತ ಒಂದು ಕಾಲಕೆ
ಆ ಕೈವಲ್ಯಭೋಗಸುಖ ಅವರಿಗೆ ಬೇಕೆ । ೨ ।
ಜಯಾಜಯ ಲಾಭಾಲಾಭ ಮಾನಾಪಮಾನ
ಭಯಾಭಯ ಸುಖದುಃಖ ಲೋಷ್ಟಕಾಂಚನ
ಪ್ರಿಯಾಪ್ರಿಯ ನಿಂದಾನಿಂದಾಸ್ತುತಿಗಳನುದಿನ
ಶ್ರೀಯರಸ ಚಿಂತಿಸುವರೊ ನಿನ್ನ ಅಧೀನ । ೩ ।
ಈಶಿತವ್ಯರೆಂಬೋರೆ ಏಕಾಂತ ಭಕ್ತರು
ದೇಶಕಾಲೋಚಿತ ಧರ್ಮಾಕರ್ಮಾಸಕ್ತರು
ಆಶಾ ಕ್ರೋಧ ಲೋಭ ಮೋಹ ಪಾಶ ಮುಕ್ತರು
ಈ ಸುಜನರೇ ಶಾಪಾನುಗ್ರಹ ಶಕ್ತರು । ೪ ।
ಕಂಡಕಂಡಲ್ಲಿ ವಿಶ್ವರೂಪ ಕಾಂಬೋರು

ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞವೆಂಬೋರು
ಬಂಡುಣಿಯಂದದಿ ನಾಮಾಮೃತವ ಸವಿವರು
ಹೆಂಡರು ಮಕ್ಕಳು ನಿನ್ನ ತೊಂಡರೆಂಬೋರು । ೫ ।
ಬಿಡರು ತಮ್ಮ ಸ್ವಧರ್ಮಗಳೇನು ಬಂದರು
ಬಡರು ದೈನ್ಯ ಒಬ್ಬರಿಗು ಲೋಕವಂದ್ಯರು
ಪಿಡಿಯರೊ ನಿನ್ನ ದ್ವೇಷಿಗಳಿಂದೇನು ಬಂದರು
ಕೊಡುವರು ಬೇಡಿದಿಷ್ಟಾರ್ಥ ನಿತ್ಯಾನಂದರು । ೬ ।
ನಗುವರೊ ರೋದಿಸುವರು ನಾಟ್ಯವಾಡೋರೊ
ಬಗೆಯರೊ ಬಡತನ ಭಾಗ್ಯ ಭಾಗವತರು
ತೆಗೆಯರೊ ನಿನ್ನಲ್ಲಿ ಮನವನೊಮ್ಮೆಯಾದರೂ
ಜಗನ್ನಾಥವಿಟ್ಠಲ ನಿನ್ನವರೇನು ಧನ್ಯರೊ । ೭ ।

## ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ದಾಸೋಹಂ ತವ ದಾಸೋಹಂ ತವ ದಾಸೋಹಂ ತವ ದಾಸೋಹಂ
ವಾಸುದೇವ ವಿಗತಾಘಸಂಘ ತವ । ಪ ।
ಜೀವಾಂತರ್ಗತ ಜೀವನಿಯಾಮಕ
ಜೀವವಿಲಕ್ಷಣ ಜೀವನದ
ಜೀವಾರಾಧಕ ಜೀವರೂಪ ರಾ
ಜೀವಭವಜನಕ ಜೀವೇಶ್ವರ ತವ । ೧ ।
ಕಾಲಾಂತರ್ಗತ ಕಾಲನಿಯಾಮಕ
ಕಾಲಾತೀತ ತ್ರಿಕಾಲಜ್ಞ
ಕಾಲ ಪ್ರವರ್ತಕ ಕಾಲನಿವರ್ತಕ
ಕಾಲೋತ್ಪಾದಕ ಕಾಲಮೂರ್ತೆ ತವ । ೨ ।
ಕರ್ಮಕರ್ಮ ಕೃತಕರ್ಮ ಕೃತಾಗಮ
ಕರ್ಮಫಲಪ್ರದ ಕರ್ಮಜಿತ
ಕರ್ಮ ಬಂಧ ಮಹಾಕರ್ಮವಿಮೋಚಕ
ಕರ್ಮನಿಗ್ರಹ ಕರ್ಮಸಾಕ್ಷಿ ತವ । ೩ ।
ಧರ್ಮರೂಪ ಮಹಾಧರ್ಮವಿವರ್ಧನ

ಧರ್ಮವಿದುತ್ತಮ ಧರ್ಮನಿಧೇ
ಧರ್ಮಸೂಕ್ಷ್ಮ ಮಹಾಧರ್ಮ ಸಂರಕ್ಷಕ
ಧರ್ಮಸಾಕ್ಷಿ ಯಮಧರ್ಮಪುತ್ರ ತವ ।೪।
ಮಂತ್ರ ಯಂತ್ರ ಮಹಾಮಂತ್ರಬೀಜ ಮಹಾ
ಮಂತ್ರರಾಜ ಗುರುಮಂತ್ರಧೃತ
ಮಂತ್ರಮೇಯ ಮಹಾಮಂತ್ರ ನಿಯಾಮಕ
ಮಂತ್ರದೇವ ಜಗನ್ನಾಥವಿಟ್ಠಲ ತವ ।೫।

### ರಾಗ – ಪಂತುವರಾಳಿ : ತಾಳ – ಆದಿತಾಳ

ವಿಟ್ಠಲಯ್ಯ ವಿಟ್ಠಲಯ್ಯ ।ಪ।
ತಟಿತ್ಕೋಟಿ ನಿಭಕಾಯ ಜಗನ್ನಾಥ
ವಿಟ್ಠಲಯ್ಯ ವಿಟ್ಠಲಯ್ಯ ।ಅ ಪ।
ಭಜಿಸುವೆ ನಿನ್ನನು ಅಜಭವ ಸುರನುತ
ಭಜಕಾಮರತರು ಕುಜನಕುಠಾರ ।೧।
ನೀ ಕರುಣಿಸದೆ ನಿರಾಕರಿಸಲು ಎನ್ನ
ಸಾಕುವರಾರೊ ದಯಾಪರಮೂರುತಿ ।೨।
ಶರಣಾಗತರನು ಪೊರೆವನೆಂಬ ತವ
ಬಿರುದು ಕಾಣೊ ಸಿರಿವರ ಜಗನ್ನಾಥ ।೩।

### ರಾಗ – ಸುರಟಿ : ತಾಳ – ಅಟತಾಳ

ಮಂಗಳ ಗುರು ರಾಘವೇಂದ್ರಗೆ ಜಯ
ಮಂಗಳ ಸುಜನಾಂಬುಧಿಚಂದ್ರಗೆ ।ಪ।
ಶ್ರೀ ಸುಧೀಂದ್ರಕುಮಾರಗೆ ಮಂಗಳ
ಭೂಸುರನುತ ಮಹಿಮಗೆ ಮಂಗಳ
ದೇಶಿಕಕುಲ ವನಜಾರ್ಕಗೆ ಮಂಗಳ
ಭಾಸುರಕೀರ್ತಿಯ ಪಡೆದವಗೆ ।೧।
ವೃಂದಾವನದ ಒಳಗೆ ಸುರದ್ರುಮ–
ದಂದದಿ ರಾಜಿಸುವಗೆ ಮಂಗಳ

ಅಂಧ ಪಂಗು ಮೂಕ ಬಧಿರರಿಗೀಪ್ಸಿತ
ಸಂದೋಹ ಸಲಿಸುವ ಮುನಿವರಗೆ ।೨।
ಭೂತಪ್ರೇತ ವೇತಾಳ ಭಯವಿಪಿನ
ವೀತಿಹೋತ್ರನೆನಿಪಗೆ ಮಂಗಳ
ವಾತಜನುತ ಜಗನ್ನಾಥವಿಟ್ಠಲನ
ದೂತರ ಸಲಹುವ ದಾತನಿಗೆ ।೩।

Collection by: Narahari Sumadhwa
For www.sumadhwaseva.com
email – naraharisumadhwa@yahoo.in
(Phone no 09042729165)